



## ಮಿನಿ ವಿದ್ಯುತ್ ಉತ್ಪಾದನೆ ಕೇಂದ್ರ

ಮಡಿಕೇರಿಯಿಂದ ಸುಳ್ಯದ ರಸ್ತೆಯಲ್ಲಿ ಸ್ವಲ್ಪ ದೂರ ಸಾಗಿದರೆ ಜೋಡುಪಾಲದ ತಿರುವಿನಲ್ಲಿ ರಸ್ತೆ ಪಕ್ಕದಲ್ಲಿ ಅಂಗಡಿಗಳು ಸಿಗುತ್ತವೆ. ಈ ಅಂಗಡಿಯ ಪಕ್ಕದಲ್ಲಿ ಅಬ್ಬಿಕೊಲ್ಲಿ ಜಲಪಾತವಿದೆ. ಜಲಪಾತದಿಂದ ಬೀಳುವ ನೀರಿಗೆ ಪಿವಿಸಿ ಪೈಪ್ ಅನ್ನು ಇಟ್ಟು ಪೈಪಿನ ಮುಖಾಂತರ ರಭಸವಾಗಿ ನೀರು ಬಂದು ಮೋಟಾರಿನ ಮೇಲೆ ಬೀಳುವಂತೆ ಮಾಡಿದ್ದಾರೆ. ನೀರಿನ ರಭಸಕ್ಕೆ ಮೋಟಾರು ತಿರುಗಿ ವಿದ್ಯುತ್ ಉತ್ಪಾದನೆಯಾಗುತ್ತದೆ. ಕೊಯಮತ್ತೂರಿನಿಂದ ಹನ್ನೆರಡು ಸಾವಿರ ರೂಪಾಯಿ ಕೊಟ್ಟು ಈ ಮೋಟಾರುಗಳನ್ನು ತಂದಿದ್ದಾರೆ, ಮೋಟಾರಿನಿಂದ ಉತ್ಪತ್ತಿಯಾಗುವ ವಿದ್ಯುತ್‌ನಿಂದ ಐದು ವ್ಯಾಟಿನ ಐದು ಬಲ್ಬ್‌ಗಳು ಉರಿಯುತ್ತವೆ. ಹೀಗೆ ಜಲಪಾತದಿಂದ ವಿದ್ಯುತ್ ಉತ್ಪಾದಿಸಿಕೊಂಡು ಅಂಗಡಿಯವರು ಸ್ವಾವಲಂಬಿಗಳಾಗಿದ್ದಾರೆ.

**– ಎಂ.ಎಸ್.ಧರ್ಮೇಂದ್ರ, ದೊಡ್ಡಮಗ್ಗೆ**



## ವರುಣನ ಸ್ವಾಗತಿಸುವ 'ಗೊಗ್ಗವ್ವ'

ವರುಣನ ಕೃಪೆಗಾಗಿ ನಾಡಿನಲ್ಲಿ ಏನೆಲ್ಲ ಸಂಪ್ರದಾಯ, ಆಚರಣೆಗಳು ನಡೆಯುತ್ತವೆ. ಕತ್ತೆ ಮದುವೆ ಮಾಡುವುದು, ದೇವರಿಗೆ ಪ್ರಸಾದ ವ್ಯವಸ್ಥೆ, ಗುರ್ಜಿ ಗುರ್ಜಿ ಆಚರಣೆ.. ಹೀಗೆ ಹಲವು ಬಗೆಯ ಪದ್ಧತಿಗಳು ನಡೆಯುತ್ತವೆ. ಅದೇ ರೀತಿ 'ಗೊಗ್ಗವ್ವಳ' ಆಚರಣೆ ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಕಂಡು ಬರುತ್ತದೆ.

ಈ ಚಿತ್ರದಲ್ಲಿರುವುದು ಬಾದಾಮಿ ತಾಲೂಕಿನ ಗುಳೇದಗುಡ್ಡದ ರಾಚಪ್ಪ ಹುನಗುಂದ ಅವರ ಮನೆಯ ಬಾಗಿಲ ಬಳಿಯ ಗೊಗ್ಗವ್ವಳ ಮೂರ್ತಿ. ಮಣ್ಣಿನಿಂದ ಮಾಡಿದ 'ಗೊಗ್ಗವ್ವ' ಳ ಮೂರ್ತಿಯನ್ನು ಬೆಳಿಗ್ಗೆಯಿಂದ ಸಂಜೆಯವರೆಗೆ ಮನೆಯ ಬಾಗಿಲು ಮುಂದೆ ಇಡಲಾಗುತ್ತದೆ. ಈ ಸಂದರ್ಭದಲ್ಲಿ ಗೊಗ್ಗವ್ವಳ ಮೂರ್ತಿಯ ಬಾಯಿ ಬಿರುಕು ಬಿಟ್ಟರೆ ಅಂದು ಇಳೆಗೆ ಮಳೆರಾಯನ ಆಗಮನ ನಿಶ್ಚಿತ ಎಂಬ ನಂಬಿಕೆ.

ಮೂರ್ತಿಯ ಮೂಗಿಗೆ ಮೆಣಸಿನಕಾಯಿ, ಕಣ್ಣುಗಳಿಗೆ ಗುಲಗಂಜಿ ಮತ್ತು ಹಲ್ಲುಗಳಿಗಾಗಿ ಕುಸುಬಿ ಬೀಜಗಳನ್ನು ಬಳಸುತ್ತಾರೆ. ಮಳೆಯಾಗದ ಸಂದರ್ಭದಲ್ಲಿ ನಮ್ಮ ಹಿರಿಯರ ಕಾಲದಿಂದಲೂ ಈ ಗೊಗ್ಗವ್ವಳ ಮೂರ್ತಿ ಪ್ರತಿಷ್ಠಾಪಿಸಿ ವರುಣನನ್ನು ಸ್ವಾಗತಿಸುವ ಪದ್ಧತಿ ಇದೆ ಎನ್ನುತ್ತಾರೆ ಶ್ರೀಕಾಂತ ಹುನಗುಂದ ಅವರು.

ಚಿತ್ರ ಬರಹ:

**ಮಲ್ಲಿಕಾರ್ಜುನ ರಾಜನಾಳ, ಗುಳೇದಗುಡ್ಡ**

## ಸಿಮೆಂಟ್‌ನಲ್ಲಿ ಅರಳಿದ ಸೋಮನ ಕುಣಿತ

ಗ್ರಾಮದೇವತೆಗಳ ಹಬ್ಬ ಹಾಗೂ ಜಾತ್ರೆಯ ಸಂದರ್ಭದಲ್ಲಿ ಈ ರೀತಿಯ ಸೋಮನ ಕುಣಿತವನ್ನು ಕಾಣಬಹುದು. ಕರ್ನಾಟಕದ ಮಂಡ್ಯ, ತುಮಕೂರು, ಹಾಸನ, ಚಿಕ್ಕಮಗಳೂರು, ಬೆಂಗಳೂರು ಜಿಲ್ಲೆಗಳಲ್ಲಿ ಸೋಮನ ಕುಣಿತಗಳು ಪ್ರಸಿದ್ಧವಾಗಿವೆ. ಈ ರೀತಿಯ ಜನಪದ ಕಲಾ ಪ್ರಕಾರವನ್ನು ಸಿಮೆಂಟ್‌ನಲ್ಲಿ ಅರಳಿಸಿದವರು ಶಿಲ್ಪ ಕಲಾವಿದರಾದ ನಾರಾಯಣರಾವ್. ನೈಜತೆಯನ್ನು ಬಿಂಬಿಸುವ ಇದು ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ ಮಹಾ ವಿದ್ಯಾಲಯದ ಆವರಣದಲ್ಲಿ ಎಲ್ಲರ ಆಕರ್ಷಣೆಯ ಕೇಂದ್ರ ಬಿಂದುವಾಗಿದೆ.

**– ಬಳಕೂರು ವಿ.ಎಸ್.ನಾಯಕ್, ಬೆಂಗಳೂರು**

